# ಜೀವನದ ಪರೀಕ್ಷಾ ಕಾಲ



ನಾನು ಹತ್ತನೇ ತರಗತಿ ಓದುತ್ತಿದ್ದ ಸಮಯ. ಅರ್ಧವಾರ್ಷಿಕ ಪರೀಕ್ಷೆ ನಡೆಯುತ್ತಿತ್ತು. ಕೊನೆಯ ದಿನ ಸಮಾಜ ವಿಜ್ಞಾನದ ಪರೀಕ್ಷೆ. ರಾತ್ರಿ ಹಾಸ್ಟೆಲ್‌ನಲ್ಲಿ ಓದುತ್ತಾ ಕುಳಿತಿದ್ದೆ. ಅದೇ ಸಮಯಕ್ಕೆ ನಮ್ಮ ಸಂಬಂಧಿಯೊಬ್ಬರು ಕೊಠಡಿಗೆ ಬಂದರು. ಹಾಸ್ಟೆಲ್‌ನಲ್ಲಿ ಇರೋರನ್ನ ಮಾತನಾಡಿಸಲು ತಮ್ಮ ಕಡೆಯವರು ಬಂದರೆ ಹುಡುಗರಿಗೆ ಖುಷಿಯೋ ಖುಷಿ. ಹಾಗೆಯೇ ನಾನೂ ಖುಷಿಪಟ್ಟೆ.

ತಡೆಯಲಾರದೆ 'ಯಾಕೆ ಮಾವ ಇಷ್ಟೊತ್ತಲ್ಲಿ ಬಂದಿರಲ್ಲ?' ಅಂತ ಕೇಳಿದೆ. ಆ ಕ್ಷಣ ಅವರು ಏನೂ ಮಾತನಾಡದೆ ಮೌನಕ್ಕೆ ಜಾರಿದರು. ನಾನು ಮತ್ತೆ ಕೇಳಿದೆ. 'ಏನಿಲ್ಲ ಕಣೋ ನಿಮ್ಮಪ್ಪನಿಗೆ ಸ್ವಲ್ಪ ಹುಷಾರಿಲ್ಲ. ಅದಕ್ಕೆ ನಿನ್ನನ್ನು, ತಮ್ಮನನ್ನು ಕರೆದುಕೊಂಡು ಹೋಗಲು ಬಂದಿರುವೆ' ಅಂದರು. ನನಗೆ ಒಳಗೊಳಗೆ ಭಯ ಶುರುವಾಯಿತು. 'ಏನಾಗಿದೆಯಂತೆ ಮಾವ' ಅಂತ ಮತ್ತೆ ಕೇಳಿದೆ. 'ಏನಿಲ್ಲ ಸ್ವಲ್ಪ ಎದೆ ನೋವು ಅಂತೆ' ಅಂತ ಸಮಾಧಾನಿಸಿದರು. ನನಗೇಕೋ ಸಮಾಧಾನವಾಗಲಿಲ್ಲ. ನಿದ್ರೆ ಹತ್ತಲಿಲ್ಲ. ಬೆಳಕಾಯಿತು.

'ಇವತ್ತು ಕೊನೆಯ ಪರೀಕ್ಷೆ ಇದೆ. ಮುಗಿಸೇ ಹೋಗೋಣ ಮಾವ' ಅಂದೆ. 'ಬೇಡ ಈಗಲೇ ಹೋಗೋಣ' ಅಂದಾಗ ಅನುಮಾನ ಬರಲಾರಂಭಿಸಿತು. ನಾನು ಎಷ್ಟೇ ಕೇಳಿದರೂ ಏನೂ ಹೇಳದೆ, 'ಏ ಅಪ್ಪಾಜಿಗೆ ಆರಾಮಿಲ್ಲ. ನಿಮ್ಮನ್ನು ನೋಡಬೇಕು ಅಂತ ಕನವರಿಸುತ್ತಿದ್ದರು. ಅದಕ್ಕೆ ಕರ್ಕೊಂಡು ಹೋಗೋಣ ಅಂತ ಬಂದೀನಿ' ಅಂತ ಊರಿಗೆ ಕರೆದುಕೊಂಡು ಬಂದರು. ಮನೆಯ ಬಳಿ ನೋಡಿದರೆ ಜನವೋ ಜನ. ಪ್ರೀತಿಯ ಅಪ್ಪಾಜಿ ಹೃದಯಾಘಾತದಿಂದ ಇಹಲೋಕವನ್ನೇ ತ್ಯಜಿಸಿದ್ದರು. ನಮಗೆಲ್ಲ ಸರ್ವಸ್ವವಾಗಿದ್ದ ಅವರ ಅಕಾಲಿಕ ಸಾವು ಅರಗಿಸಿಕೊಳ್ಳಲಾಗದಂತಹ ದುಃಖ ಉಂಟು ಮಾಡಿತ್ತು. ಅಲ್ಲಿಂದ ಮುಂದೆ ಎಲ್ಲ ವಿಧಿವಿಧಾನಗಳು ಮುಗಿದವು.

'ಸತ್ತಾಗ ದೇವರಿಲ್ಲ. ಕೆಟ್ಟಾಗ ನೆಂಟರಿಲ್ಲ' ಎಂಬ ಪರಿಸ್ಥಿತಿ ನಮಗಾಯಿತು. ಮನೆಗೆ ಹಿರಿಮಗನಾಗಿದ್ದ ನನಗೆ ಮನೆಯ ಜವಾಬ್ದಾರಿ ಬಿತ್ತು. ದಸರಾ ನಂತರ ಶಾಲಾ ಬಾಗಿಲು ತೆಗೆದು ತಿಂಗಳಾಗುತ್ತಾ ಬಂದಿತ್ತು. ವಾರಗೆ ಗೆಳೆಯರೆಲ್ಲ ಶಾಲೆ ಕಡೆ ಮುಖ ಮಾಡಿದ್ದರೆ, ನಾನು ಎತ್ತುಗಳನ್ನು ಮೇಯಿಸಲು ಮತ್ತು ಅವರಿವರ ಹೊಲಗದ್ದೆಗಳಿಗೆ ಕೂಲಿ ನಾಲಿ ಮಾಡಲು ಹೋಗಬೇಕಾದ ಪರಿಸ್ಥಿತಿ ಎದುರಾಯಿತು. ಶಾಲೆಗಷ್ಟೇ ಹೋಗಿದ್ದ ನಮಗೆ ಕೂಲಿ ಮಾಡಿ ಅಭ್ಯಾಸವಿರಲಿಲ್ಲ. ಆದರೆ ಜೀವನದ ಬಂಡಿ ಸಾಗಲೇಬೇಕಲ್ಲ. ಹೀಗೆ ಒಂದು ದಿನ ಎತ್ತುಗಳನ್ನು ಮೇಯಿಸಿಕೊಂಡು ಸಂಜೆ ಮನೆಗೆ ಬಂದಾಗ ಸುಸ್ತಾಗಿ ಮೂಲೆಯಲ್ಲಿ ಅಳುತ್ತಾ ಕೂತಿದ್ದೆ. ನಾನು ಅಳುವುದನ್ನು ಕೇಳಿಸಿಕೊಂಡ ಅಮ್ಮ ಹತ್ತಿರಕ್ಕೆ ಬಂದು 'ಯಾಕೋ ಅಳ್ತಾ ಇದ್ದೀಯ?' ಅಂತ ಕೇಳಿದರು. 'ಅಮ್ಮ ನನಗೆ ಶಾಲೆಗೆ ಹೋಗಬೇಕಂತ ಆಸೆ ಐತೆ. ಕಳಿಸ್ತೀಯಾ?' ಅಂತ ಕೇಳಿದೆ.

ಮರು ಮಾತನಾಡದ ನನ್ನಮ್ಮ 'ಆಯ್ತು ಕಣೋ ನಾಳೆಯಿಂದಲೇ ನೀನು ಶಾಲೆಗೆ ಹೋಗು. ನಾನು ಕಷ್ಟಪಟ್ಟು ದುಡಿದು ನಿನ್ನನ್ನು ಓದಿಸುತ್ತೇನೆ. ಆದರೆ ನೀನು ಬಹಳ ಚೆನ್ನಾಗಿ ಓದುತ್ತೀಯ ಅಂದ್ರೆ ಮಾತ್ರ' ಅಂತ ನನ್ನ ಬಳಿ ವಚನ ಪಡೆದರು. 'ಖಂಡಿತ ಅಮ್ಮ ನಾನು ಚೆನ್ನಾಗಿ ಓದಿ, ಯಾವುದಾದರೂ ಸರ್ಕಾರಿ ನೌಕರಿ ತಗಂಡೆ ತಗಂತೀನಿ' ಅಂತ ಅಮ್ಮನಿಗೆ ಮಾತು ಕೊಟ್ಟೆ. ಮರು ದಿವಸದಿಂದ ಶಾಲೆಗೆ ತೆರಳಿದೆ. ಅಮ್ಮನಿಗೆ ಕೊಟ್ಟಿದ್ದ ಆ ಮಾತುಗಳು ನನ್ನನ್ನು ಸದಾ ಎಚ್ಚರಿಸುತ್ತಿದ್ದವು. ಬಹು ಕಷ್ಟದ ಪರಿಸ್ಥಿತಿಯಲ್ಲಿಯೂ ಓದಿ ಸರಕಾರಿ ನೌಕರಿ ಪಡೆದುಕೊಂಡೆ. ನನ್ನ ತಂದೆಯವರ ಆಕಸ್ಮಿಕ ಸಾವು ನಮಗೆ ಪರೀಕ್ಷಾ ಕಾಲವೇ ಆಗಿತ್ತು. ಬಂದೊದಗಿದ ಆಕಸ್ಮಿಕ ವಿಷಮ ಪರಿಸ್ಥಿತಿಯನ್ನು ಎದುರಿಸಿದ್ದರ ಫಲವಾಗಿ ಸಮಾಜದಲ್ಲಿ ಗೌರವವಾಗಿ ಬದುಕುತ್ತಿರುವೆ.


—ಶೇಖರಯ್ಯ ಟಿ.ಎಚ್.ಎಂ. ಗೆದ್ದಲಗಟ್ಟೆ, ವಿಜಯನಗರ

# ಪೇಷೆಂಟ್ ಆಗಿ ಡಾಕ್ಟರ್ ಆದ ದಿನ...

ಅಂದು ಜನವರಿ 10, 2022. ಎಂದಿನಂತೆ ಅಂದೂ ಬೆಳಿಗ್ಗೆ ಒಂದಿಷ್ಟು ಹುರುಪು, ಉಲ್ಲಾಸ, ಕನಸು, ಆತಂಕ, ಒತ್ತಡದ ನಡುವೆಯೇ ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಪಿಎಚ್.ಡಿ. ಮುಕ್ತ ಮೌಖಿಕ ಪರೀಕ್ಷೆಗೆ ತಯಾರಾಗಿ ವಿಟ್ಲದಿಂದ ದ್ವಿಚಕ್ರ ವಾಹನದಲ್ಲಿ ಮಂಗಳೂರು ವಿವಿಯ ಹಾದಿ ಹಿಡಿದಿದ್ದೆ. ಪರೀಕ್ಷೆಯ ಎಲ್ಲಾ ತಯಾರಿಗಳೂ ಅದಾಗಲೇ ಮುಗಿದಿದ್ದು, ನಾನು ಹೋಗಿ ಗಮ್ಯ ಸೇರುವುದೊಂದೇ ಉಳಿದಿತ್ತು.

ಐದು ವರುಷಗಳ ಕಾಲ ಯುಜಿಸಿಯ ಶಿಷ್ಯವೇತನದೊಂದಿಗೆ ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿನಿಯಾಗಿ ಸಂಶೋಧನೆ ನಡೆಸುತ್ತಿದ್ದ ನನಗದು ಹೊಸ ಹಾದಿಯಲ್ಲ. ಅದೇಕೋ ಗೊತ್ತಿಲ್ಲ, ಅಂದು ಸುಮಾರು 2 ಕಿ.ಮೀ. ದೂರದಿಂದ ಕಬ್ಬಿಣದ ರಾಡ್ ತೆಗೆದುಕೊಂಡು ಹೋಗುತ್ತಿದ್ದ ಮಿನಿ ಲಾರಿಯನ್ನು ಹಿಂಬಾಲಿಸುತ್ತಲೇ ಇದ್ದೆ. ಮೊಬೈಲಿನಲ್ಲಿ ಮಾತನಾಡುತ್ತಿದ್ದ ಆ ಡ್ರೈವರ್ ಗುಂಡಿ ತಪ್ಪಿಸಲು ಅದೇನು ಮಾಡಿದನೋ ಗೊತ್ತಿಲ್ಲ. ಒಂದು ರಾಡ್ ನನ್ನ ಸ್ಕೂಟಿಯ ಎಡಗನ್ನಡಿಯನ್ನು ಮೆಲ್ಲನೇ ಸವರಿಹೋಯಿತು ಅಷ್ಟೇ. ನಾನು ಕೆಳಗೆ ಬಿದ್ದಿದ್ದೆ. ಅದರಿಂದಾಗಿ ಕಾಲರ್ ಬೋನ್ ಮುರಿದು ಅಲ್ಲಿ ಸೇರಿದ ಜನರು ಆಸ್ಪತ್ರೆಗೆ ಸೇರಿಸಲು ಮುಂದಾದರೂ ಎಲ್ಲವನ್ನೂ ನಿರಾಕರಿಸಿ ಒಂದಿಬ್ಬರ ಸಹಾಯದಿಂದ ಮುಡಿಪು ಸರಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಯಾಗಿ ಒಂದು ಇಂಜೆಕ್ಷನ್, ಎರಡು ಮಾತ್ರೆ ಜೊತೆಗೆ ಕೈಗೆ ಬೆಲ್ಟ್ ಧರಿಸಿ ಅಂದೇ ಮೌಖಿಕ ಪರೀಕ್ಷೆ ಮುಗಿಸಿದೆ. ಪಿಎಚ್.ಡಿ. ಪದವಿ ಪಡೆದ ಆ ಕ್ಷಣ ಜೊತೆಗಿದ್ದ ಎಲ್ಲರೂ ಆತಂಕದಲ್ಲಿದ್ದರೆ ನನ್ನೊಬ್ಬಳ ಮುಖದಲ್ಲಿ ಮಾತ್ರ ನಗೆ ಮಿನುಗಿತ್ತು. ಅಂತೂ ಮರುದಿವಸ ಸರ್ಜರಿ ಮಾಡಿಸಿಕೊಂಡು ಎರಡು ತಿಂಗಳ ರೆಸ್ಟ್ ಪಡೆದ ಆ ದಿನಗಳ ಮರೆಯಲಿ ಹೇಗೆ?

—ಡಾ. ಮೈತ್ರಿ ಭಟ್, ವಿಟ್ಲ



## ನಮ್ಮ ಸುತ್ತಲಿನ ಸಾಧಕಿಯರು

ನಮ್ಮ ಸುತ್ತಮುತ್ತಲೂ, ಹಲವಾರು ಅಡೆತಡೆಗಳನ್ನು ದಾಟಿ, ತಮ್ಮ ಕ್ಷೇತ್ರಗಳಲ್ಲಿ ಗೆಲುವು ಪಡೆದಿರುವ ಯಶಸ್ವಿನಿಯರು ಇರುತ್ತಾರೆ. ಎಲೆಮರೆ ಕಾಯಿಯಂತೆ ದುಡಿಯುತ್ತಿರುವ ಸಾಧಕಿಯರು ನಿಮ್ಮ ಸುತ್ತಲಿದ್ದರೆ ಸಣ್ಣದೊಂದು ಪರಿಚಯ ಬರೆದು ಕಳುಹಿಸಿ. ಅವರ ಸಂಘರ್ಷ, ಉಳಿದವರಿಗೆ ಸ್ಫೂರ್ತಿಯಾಗಬಹುದು. ಪ್ರೇರಣೆ ನೀಡುವಂಥ ಸಾಧಕಿಯರನ್ನು ಪರಿಚಯಿಸಿದರೆ ಆಯ್ದ ಕೆಲವನ್ನು ಪ್ರಕಟಿಸಲಾಗುವುದು. ಬರಹ ನುಡಿ ಅಥವಾ ಯುನಿಕೋಡ್‌ನಲ್ಲಿ 150 ಪದಗಳ ಮಿತಿಯಲ್ಲಿರಲಿ. ಕೊನೆಯ ದಿನಾಂಕ ಏಪ್ರಿಲ್ 2. ಇಮೇಲ್–**editorsu@sudha.co.in**

